# ಸಾನಿಯಾ ಕಾಲ ಮುಗಿಯಿತಾ?




ಸದಾ ಸುದ್ದಿಯಲ್ಲಿರುತ್ತಿದ್ದ ಸಾನಿಯಾ ಇತ್ತೀಚಿನ ದಿನಗಳಲ್ಲಿ ಸದ್ದೇ ಮಾಡುತ್ತಿಲ್ಲ. ಗಾಯಗಳಿಂದ ಜರ್ಜರಿತವಾಗಿರುವ ಅವರು ಗೆಲುವನ್ನೇ ಮರೆತಂತಿದೆ. ಕಡಿಮೆ ಅವಧಿಯಲ್ಲಿ ಸಿಕ್ಕ ಖ್ಯಾತಿ ಅವರ ಕ್ರೀಡಾ ಜೀವನಕ್ಕೆ ಮುಳುವಾಯಿತೆ?

■ ಕೆ.ಓಂಕಾರ ಮೂರ್ತಿ

ಯಶಸ್ಸಿನ ಶಿಖರ ಏರುವುದು ಕಷ್ಟವಲ್ಲ; ಆದರೆ ಅಲ್ಲಿ ಉಳಿಯುವುದು ತುಂಬಾ ಕಷ್ಟ!

ಈ ಮಾತು ಸಾನಿಯಾ ಮಿರ್ಜಾಗೆ ಅನ್ವಯವಾಗಬಹುದೇನೊ? ಆದರೆ ಬಹು ಕಡಿಮೆ ಅವಧಿಯಲ್ಲಿ ಸಿಕ್ಕ ಖ್ಯಾತಿಯೇ ಸಾನಿಯಾ ಅವರ ಟೆನಿಸ್ ಜೀವನಕ್ಕೆ ಮುಳುವಾಗುವ ಹಂತ ತಲುಪಿರುವುದು ಮಾತ್ರ ನಿಜ.

ಸಾನಿಯಾ ಸೃಷ್ಟಿಸಿದ್ದ ಕ್ರೇಜ್ ನೋಡಿ ಮುಂದೊಂದು ದಿನ ಈ ಹುಡುಗಿ ಗ್ರ್ಯಾಂಡ್‌ಸ್ಲಾಮ್ ಗೆಲ್ಲಬಹುದೇನೊ ಎಂಬ ಭರವಸೆ ಮೂಡಿತ್ತು. ಆದರೆ ಅವರು ಮೊದಲನೇ ಸುತ್ತು, ಎರಡನೇ ಸುತ್ತಿನಲ್ಲಿ ಹೊರಬೀಳುತ್ತಾ ಹೋದರು.

ಈಗ ಮೆಲ್ಬರ್ನ್‌ನಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಸಿಂಗಲ್ಸ್‌ನಲ್ಲೂ ಮೊದಲ ಸುತ್ತಿನಲ್ಲಿ ಔಟ್. 2011ರಲ್ಲಿ ಅವರು ಆಡಿದ್ದೇ ಕಡಿಮೆ. ಈಗ 106ನೇ ರ‍್ಯಾಂಕ್‌ನಲ್ಲಿದ್ದಾರೆ. ನಿಜ, ಸಾನಿಯಾ ಕಾಲ ಮುಗಿದಂತೆನಿಸುತ್ತದೆ. ಅವರು ಎದ್ದು ಬರುವುದು ಕಷ್ಟ. ಏಕೆಂದರೆ ಟೆನಿಸ್‌ನಲ್ಲಿ 25 ವರ್ಷ ವಯಸ್ಸು ಎಂದರೆ ವಿದಾಯ ಹೇಳುವ ಸಮಯವೂ ಹೌದು. ಹೈದರಾಬಾದ್‌ನ ಈ ಆಟಗಾರ್ತಿಗೆ ಈಗ 25 ವರ್ಷ.

ಎಷ್ಟೋ ಮಂದಿ ಮದುವೆಯಾದ ಮೇಲೂ ಚಾಂಪಿಯನ್ ಆಗಿದ್ದಾರೆ. ಅದಕ್ಕೆ ಬೆಲ್ಜಿಯಂನ ಕಿಮ್ ಕ್ಲೈಸ್ಟರ್ಸ್, ಜಸ್ಟಿನ್ ಹೆನಿನ್ ಅವರಂಥವರೇ ಉದಾಹರಣೆ. ಮಾರ್ಟಿನಾ ನವ್ರಾಟಿಲೋವಾ ತಮ್ಮ 40ನೇ ವಯಸ್ಸಿನಲ್ಲಿ ಚಾಂಪಿಯನ್ ಆಗಿದ್ದರು.

ಆದರೆ ಸಾನಿಯಾ ಭಾರತದ ನೀರು ಕುಡಿದು ಬೆಳೆದ ಹುಡುಗಿ. ಭಾರತದ ಕ್ರೀಡಾಪಟುಗಳ ದೈಹಿಕ ಸಾಮರ್ಥ್ಯದ ಹಣೆಬರಹ ಏನು ಎಂಬುದು ಎಲ್ಲರಿಗೂ ಗೊತ್ತಿರುವಂಥದ್ದೆ. ಜೊತೆಗೆ ಮದುವೆ ಆದ ಮೇಲೆ ಅವರು ಸಾಕಷ್ಟು ಬದಲಾಗಿದ್ದಾರೆ. ಪತಿ ಹಾಗೂ ಕ್ರಿಕೆಟಿಗ ಶೋಯಬ್ ಮಲಿಕ್ ಜೊತೆ ಪಾಕಿಸ್ತಾನ, ದುಬೈನಲ್ಲೇ ಹೆಚ್ಚು ಕಾಲ ಕಳೆಯುತ್ತಿದ್ದಾರೆ.

ಮಿರ್ಜಾಗೆ ಸಣ್ಣ ವಯಸ್ಸಿನಲ್ಲೇ ಇನ್ನಿಲ್ಲದ ಯಶಸ್ಸು ಲಭಿಸಿತು. ಒಂದು ಹಂತದಲ್ಲಿ ಸಚಿನ್ ತೆಂಡೂಲ್ಕರ್, ಶಾರೂಖ್ ಖಾನ್ ಅವರಷ್ಟೇ ಖ್ಯಾತಿ ಹೊಂದಿದ್ದರು. ಒಮ್ಮೆ ಸಿಂಗಲ್ಸ್‌ನಲ್ಲಿ ವಿಶ್ವದ 27ನೇ ಸ್ಥಾನಕ್ಕೇರಿ ಭಾರತೀಯರಲ್ಲಿ ದೊಡ್ಡ ಆಸೆ ಹುಟ್ಟಿಸಿದ್ದರು. ಆದರೆ ಗಾಯ ಹಾಗೂ ವಿವಾದಗಳು ಅವರನ್ನು ಹೈರಾಣಾಗಿಸುತ್ತಾ ಹೋದವು. ಈಗ ದೊಡ್ಡ ದೊಡ್ಡ ಟೂರ್ನಿಗಳಲ್ಲಿ ಎರಡನೇ ಸುತ್ತು ದಾಟಿ ಮುಂದಕ್ಕೆ ಹೋಗಲು ಅವರಿಗೆ ಸಾಧ್ಯವಾಗುತ್ತಿಲ್ಲ.

‘ಸಾನಿಯಾ ಅವರಂತೆ ನಾವು ಮೇಲೇರಬೇಕು’ ಎಂಬ ಭಾವನೆ ದೇಶದ ಅದೆಷ್ಟೋ ಹುಡುಗಿಯರಲ್ಲಿ ಮೂಡಿತ್ತು. ಆದರೆ ಸಾನಿಯಾ ಅವರಂತಹ ಮತ್ತೊಬ್ಬ ಆಟಗಾರ್ತಿಯನ್ನು ತಯಾರಿಸಲು ಅಖಿಲ ಭಾರತ ಟೆನಿಸ್ ಸಂಸ್ಥೆ (ಎಐಟಿಎ) ಪ್ರಯತ್ನಿಸಲೇ ಇಲ್ಲ. ಅವರ ಯಶಸ್ಸಿನ ಗುಂಗಿನಲ್ಲಿ ಮತ್ತೊಬ್ಬ ಟೆನಿಸ್ ಆಟಗಾರ್ತಿ ಬೆಳೆಯಲೇ ಇಲ್ಲ. ಆ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳಲಿಲ್ಲ.

ಪ್ರೋತ್ಸಾಹ, ಪ್ರಾಯೋಜಕತ್ವ ಹಾಗೂ ಮಾಧ್ಯಮಗಳ ಒಲವು ಸಾನಿಯಾ ಅವರನ್ನು ತಾರೆಯನ್ನಾಗಿಸಿತು. ತಾರೆಯಾದ ಬೆನ್ನಲ್ಲೇ ವಿವಾದಗಳೂ ಬೆನ್ನಟ್ಟಿದವು. ತಾರಾಲೋಕದಲ್ಲಿ ಸಾನಿಯಾರ ನೈಜ ಆಟಕ್ಕೆ ಭಂಗ ಬಂದಿದೆ. ಇದರಿಂದ ನಷ್ಟ ಆಗಿರುವುದು ಭಾರತೀಯ ಟೆನಿಸ್ಸಿಗೆ. ಇನ್ನಷ್ಟು ಮೇಲೇರುವ ಸಾಮರ್ಥ್ಯ ಇದ್ದ ಹುಡುಗಿ ಹೀಗೆ ಸೋಲುತ್ತಿರುವುದು ನಿಜಕ್ಕೂ ಸಂಕಟದ ವಿಷಯವೇ.